ಕರಾಸಕೈಅನಿನಿ
**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**
**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010
ದೂರವಾಣಿ:080-23407011-25 ಇ–ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಕ್ರಯಪತ್ರ:ಅವಧಿ:2024 ದಿನಾಂಕ 23-09-2024

## ಕಛೇರಿ ಆದೇಶ

ವಿಷಯ: 2020-25ನೇ ಸಾಲಿನ ಕೈಗಾರಿಕಾ ನೀತಿ ಅನ್ವಯ ಹಂಚಿಕೆ ಪಡೆದಿರುವ KSSIDC ನಿವೇಶನ/ಮಳಿಗೆಗಳಿಗೆ ಯೋಜನೆ ಅನುಷ್ಠಾನಗೊಳಿಸಿರುವ ಹಂಚಿಕೆದಾರರುಗಳಿಗೆ 10 ವರ್ಷಗಳ ಅವಧಿ ಬದಲಿಗೆ 2 ವರ್ಷಗಳಿಗೆ ಕ್ರಯಪತ್ರ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಸಿಐ 222 ಸಿಎಸ್‌ಸಿ 2023 ದಿನಾಂಕ 31.08.2024.

--------

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ(ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ 10 ವರ್ಷಗಳ ಅವಧಿಗೆ ಲೀಸ್-ಕಮ್-ಸೇಲ್ ಡೀಡ್ ಆಧಾರದ ಮೇಲೆ ನಿವೇಶನ/ಮಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಕರಾರು ಪತ್ರದಲ್ಲಿ ಸೂಕ್ತ Abridgement Clause ನ್ನು ಅಳವಡಿಸಿ, ಕೈಗಾರಿಕಾ ಕಟ್ಟಡ ನಿರ್ಮಾಣ ಮಾಡಿ, ವಾಣಿಜ್ಯ ಉತ್ಪಾದನೆ ಪ್ರಾರಂಭಗೊಳಿಸಿದ ದಿನಾಂಕದಿಂದ ಎರಡು ವರ್ಷಗಳ ನಿರಂತರ ಉತ್ಪಾದನೆಯ ನಂತರ, ಹಂಚಿಕೆದಾರರು ಲೀಸ್-ಕಮ್-ಸೇಲ್ ಡೀಡ್‌ನ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ಗುತ್ತಿಗೆಯ ಅವಧಿಯು ಚಲಾವಣೆಯಲ್ಲಿರುವಾಗ ಕ್ರಯಪತ್ರ ನೆರವೇರಿಸಲು ಅನುಮೋದನೆ ನೀಡಿ ಆದೇಶಿಸಿರುತ್ತದೆ.

ಮುಂದುವರೆದು, ಈ ಹಂಚಿಕೆ ನೀತಿ ಪರಿಷ್ಕರಣೆಯ ಅನುಸಾರ ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಲೀಸ್-ಕಮ್-ಸೇಲ್ ಡೀಡ್ ಕರಾರು ಪತ್ರಕ್ಕೆ ಸೂಕ್ತ ಮಾರ್ಪಾಟು ಮಾಡುವುದೆಂದು ಹಾಗೂ ಈ ನೀತಿಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅಸ್ತಿತ್ವದಲ್ಲಿರುವ ಗುತ್ತಿಗೆ ಅವಧಿಯಲ್ಲಿರುವ ಹಂಚಿಕೆದಾರರಿಗೂ ಅನ್ವಯವಾಗುವುದೆಂದು ತಿಳಿಸಲಾಗಿರುತ್ತದೆ **(ಪ್ರತಿ ಲಗತ್ತಿಸಿದೆ).**

ಈಗಾಗಲೇ 10 ವರ್ಷಗಳ ಲೀಸ್ ಅವಧಿಗೆ ಹಂಚಿಕೆ ಮಾಡಿರುವ ಮಳಿಗೆ/ನಿವೇಶನಗಳ ಹಂಚಿಕೆದಾರರಿಗೆ ಹಾಗೂ ನಿವೇಶನ ಹೊಸದಾಗಿ ಹಂಚಿಕೆ ಮಾಡುವ ಹಂಚಿಕೆದಾರರಿಗೆ ಅವರು ನಿರ್ವಹಿಸಿರುವ / ನಿರ್ವಹಿಸುವ ಲೀಸ್ ಕಂ ಸೇಲ್ ಕರಾರು ಪತ್ರದಲ್ಲಿ ಈ ಕೆಳಗಿನಂತೆ Abridgement Clause ಅಳವಡಿಸಿ, ಸೂಕ್ತ ಮಾರ್ಪಾಡು ಮಾಡಿ ನಿರ್ವಹಿಸುವುದು.

> The lessor shall sell the Scheduled Property to the Lessee during the currency of the lease period or the extended period, if any, if the Lessee has performed all the conditions herein contained and committed no breach thereof with continuous production for Two Years from the date of commercial production. All attendant expenses in connection with the sale, such as stamp duty, registration charges etc., shall be borne by the Lessee.

..2..

ಕರಾಸಕೈಅನಿನಿ



ಅಂತೆಯೇ, ಈ ಮೇಲಿನ ಸರ್ಕಾರಿ ಆದೇಶವನ್ನು ನಿಗಮದಲ್ಲಿ ಯಥಾವತ್ತಾಗಿ ಅಳವಡಿಸಿ ಆದೇಶ ಹೊರಡಿಸಿದೆ ಹಾಗೂ ಈ ಆದೇಶವನ್ನು ಸಂಬಂಧಪಟ್ಟ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಹಾಗೂ ಶಾಖಾ ಮುಖ್ಯಸ್ಥರು ಕಟ್ಟುನಿಟ್ಟಾಗಿ ಪಾಲಿಸಲು ಸಹ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಮೈಸೂರು/ಶಿವಮೊಗ್ಗ
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ / ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ತಿದ್ದುಪಡಿ ಕಛೇರಿ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ವತಿಯಿಂದ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆಯಾದ ಮಳಿಗೆ ಮತ್ತು ನಿವೇಶನಗಳ ಕ್ರಯಪತ್ರ ನೆರವೇರಿಸುವ ಕಾಲಾವಧಿಗೆ ತಿದ್ದುಪಡಿ ಮಾಡಲು ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ಸಮನ್ವಯ:ಮಳಿಗೆ/ನಿವೇಶನ:ಕ್ರಯಪತ್ರ:ಅವಧಿ:2024, ದಿನಾಂಕ: 22.01.2024.
2) ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ-441/2024, ದಿನಾಂಕ: 21.08.2024ರ ನಿರ್ಣಯ.

*****

ಮೇಲೆ ಓದಲಾದ ಕ್ರಮಾಂಕ (1) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಹಂಚಿಕೆ ಪಡೆದಿರುವ ಕೈಗಾರಿಕೋದ್ಯಮಿಗಳು ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆಯಲು ಹಾಗೂ ನಿವೇಶನಗಳನ್ನು ಅಡಮಾನ ಮಾಡಲು ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿದ್ದ ಕಾರಣದಿಂದ ರಾಜ್ಯದ ಬಂಡವಾಳ ಹೂಡಿಕೆ ಕುಂಠಿತವಾಗುತ್ತಿರುವುದನ್ನು ಪರಿಗಣಿಸಿ ಮತ್ತು ರಾಜ್ಯಕ್ಕೆ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ದೃಷ್ಟಿಯಿಂದ ಹಂಚಿಕೆ ಪಡೆದ ಘಟಕವು ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸುವಂತೆ ಕಾಸಿಯಾ (Karnataka Small Scale Industries Association - KASSIA) ಸಂಸ್ಥೆ, ಸ್ಥಳೀಯ ಕೈಗಾರಿಕಾ ಸಂಘಗಳು ಕೋರಿದ್ದರ ಹಿನ್ನೆಲೆಯಲ್ಲಿ, ದಿನಾಂಕ: 07.09.2023 ರಂದು ಜರುಗಿದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ 370ನೇ ಆಡಳಿತ ಮಂಡಳಿಯ ಸಭೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ - KIADB ಸಂಸ್ಥೆಗೆ ಸರ್ಕಾರವು ಅವಧಿ ಪೂರ್ವ ಕ್ರಯಪತ್ರ ನೀಡಲು ಅನುಮೋದಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಸಿಐ 132 ಎಸ್ ಪಿಕ್ಯೂ (ಇ) 2021, ದಿ: 01.01.2022ರ ಆದೇಶವನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೂ ಸಹ ಅನ್ವಯಿಸಿ ಆದೇಶ ನೀಡುವ ಕುರಿತು ಸರ್ಕಾರದ ಅನುಮೋದನೆ ಕೋರಲು ನಿರ್ಣಯಿಸಿರುವ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ, ಶುದ್ಧ ಕ್ರಯ ಪತ್ರವನ್ನು ನೆರವೇರಿಸಿದಲ್ಲಿ, ಕೈಗಾರಿಕೋದ್ಯಮಿಗಳು ಹಣಕಾಸು ಸಂಸ್ಥೆಗಳಿಂದ ತಮ್ಮ ಕೈಗಾರಿಕೆಗಳ ವಿಸ್ತರಣೆಗಾಗಿ ಅಗತ್ಯವಿರುವ ಬಂಡವಾಳ/ದುಡಿಮೆ ಬಂಡವಾಳ ಸಾಲ ಪಡೆಯಲು ಅನುಕೂಲವಾಗುವುದು ಹಾಗೂ ನಿಗಮವು ಕೈಗಾರಿಕೋದ್ಯಮಿಗಳಿಗೆ ಕ್ರಯಪತ್ರ ನಿರ್ವಹಿಸಿದ ನಂತರವೇ ನಿಗಮವು ಲಾಭಾಂಶ ತೋರಿಸಲು ಸಾಧ್ಯವಾಗುತ್ತದೆ. ಅದರಂತೆ, ಸರ್ಕಾರಕ್ಕೆ ಲಾಭಾಂಶದ ಪಾಲು (Dividend)ನ್ನು ಸಲ್ಲಿಸಲು ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ, KSSIDC ನಿಗಮದಿಂದ ಹಂಚಿಕೆ ಪಡೆದಿರುವ ಹಂಚಿಕೆದಾರರುಗಳು ಹಾಲಿ ಇರುವ ಗುತ್ತಿಗೆ ಕರಾರು ಪತ್ರದಲ್ಲಿ Abridgement Clause ನ್ನು ಅಳವಡಿಸಿ, ಹಂಚಿಕೆ ಪಡೆದ ನಿವೇಶನ/ಮಳಿಗೆಯಲ್ಲಿ ಉತ್ಪಾದನೆ ಪ್ರಾರಂಭ ಮಾಡಿ ಎರಡು ವರ್ಷಗಳನ್ನು ಪೂರೈಸಿದ ಹಂಚಿಕೆದಾರರುಗಳಿಗೆ ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಸಂದರ್ಭದಲ್ಲಿ, ಕ್ರಯಪತ್ರ ನೀಡುವ ಬಗ್ಗೆ ಸರ್ಕಾರದ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ರವರು ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ವತಿಯಿಂದ ಹಂಚಿಕೆ ಪಡೆದಿರುವ ಮಳಿಗೆ / ನಿವೇಶನಗಳ ಹಂಚಿಕೆದಾರರುಗಳಿಗೆ ಕ್ರಯಪತ್ರ ನೆರವೇರಿಸುವ ಕಾಲಾವಧಿಯನ್ನು 10 ವರ್ಷಗಳ ಅವಧಿ ಬದಲಿಗೆ ನಿವೇಶನ / ಮಳಿಗೆಯಲ್ಲಿ ವಾಣಿಜ್ಯ ಉತ್ಪಾದನೆ ಪ್ರಾರಂಭ ಮಾಡಿ ಎರಡು ವರ್ಷಗಳನ್ನು ಪೂರೈಸಿದ ಹಂಚಿಕೆದಾರರುಗಳಿಗೆ ಕ್ರಯಪತ್ರ ನೀಡುವ ಕುರಿತು ಸಚಿವ ಸಂಪುಟದ ಸಭೆ ಸಂಖ್ಯೆ: 17ರ ಕಾರ್ಯಸೂಚಿ ಕ್ರಮಸಂಖ್ಯೆ: 5ರ ಪ್ರಕರಣ ಸಂಖ್ಯೆ: ಸಿ-441/2024 ರಲ್ಲಿ ಅನುಮೋದಿಸಿರುವಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 222 ಸಿಎಸ್ ಸಿ 2023,**

**ಬೆಂಗಳೂರು, ದಿನಾಂಕ: 31.08.2024**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ 10 ವರ್ಷಗಳ ಅವಧಿಗೆ ಲೀಸ್-ಕಮ್-ಸೇಲ್ ಡೀಡ್ ಆಧಾರದ ಮೇಲೆ ನಿವೇಶನ / ಮಳಿಗೆ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಕರಾರು ಪತ್ರದಲ್ಲಿ ಸೂಕ್ತ Abridgement Clause ನ್ನು ಅಳವಡಿಸಿ, ಕೈಗಾರಿಕಾ ಕಟ್ಟಡ ನಿರ್ಮಾಣ ಮಾಡಿ, ವಾಣಿಜ್ಯ ಉತ್ಪಾದನೆ ಪ್ರಾರಂಭಗೊಳಿಸಿದ ದಿನಾಂಕದಿಂದ ಎರಡು ವರ್ಷಗಳ ನಿರಂತರ ಉತ್ಪಾದನೆಯ ನಂತರ, ಹಂಚಿಕೆದಾರರು ಲೀಸ್-ಕಮ್-ಸೇಲ್ ಡೀಡ್‌ನ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ, ಗುತ್ತಿಗೆಯ ಅವಧಿಯು ಚಲಾವಣೆಯಲ್ಲಿರುವಾಗ ಕ್ರಯಪತ್ರ ನೆರವೇರಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಈ ಹಂಚಿಕೆ ನೀತಿ ಪರಿಷ್ಕರಣೆಯ ಅನುಸಾರ ಪ್ರಸ್ತುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಲೀಸ್-ಕಮ್-ಸೇಲ್ ಡೀಡ್ ಕರಾರು ಪತ್ರಕ್ಕೆ ಸೂಕ್ತ ಮಾರ್ಪಾಟು ಮಾಡುವುದು.

ಮೇಲ್ಕಂಡ ನೀತಿಯು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅಸ್ತಿತ್ವದಲ್ಲಿರುವ ಗುತ್ತಿಗೆ ಅವಧಿಯಲ್ಲಿರುವ ಹಂಚಿಕೆದಾರರಿಗೂ ಅನ್ವಯವಾಗುವುದು.

ಈ ಆದೇಶವನ್ನು ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ-441/2024, ದಿನಾಂಕ: 21.08.2024ರ ನಿರ್ಣಯದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31/8/24

**(ಶರಣಪ್ಪ)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸ.ಪ್ರ.ಕೈ.)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560 001.
3) ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

4) ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (B & R), ವಿಧಾನ ಸೌಧ, ಬೆಂಗಳೂರು.
9) ಆಯುಕ್ತರು, ಕೈಗಾರಿಕಾಭಿವೃದ್ಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
10) ನಿರ್ದೇಶಕರು (ಎಂ.ಎಸ್.ಎಂ.ಇ.), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್, ಕೋರ್ಸ್ ರಸ್ತೆ, ಬೆಂಗಳೂರು - 01.
11) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010.
12) ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸು ಇಲಾಖೆ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು.
13) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
14) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1 & ಬಂ.ಹೂ), ವಿಧಾನಸೌಧ, ಬೆಂಗಳೂರು.
15) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
16) ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು & ಸಮನ್ವಯ), ವಿಕಾಸ ಸೌಧ, ಬೆಂಗಳೂರು-01.
17) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.